171(359) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನ ಬಾಗೇವಾಡಿ ಪಟ್ಟಣವನ್ನು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದಡಿ ಯಾವಾಗ ಸೇರಿಸಲಾಗುವುದು?

ಆ) ಈ ಪಟ್ಟಣವನ್ನು ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಲು ಹಾಕಿಕೊಂಡಿರುವ ಅಭಿವೃದ್ಧಿ ಪರ ಯೋಜನೆಗಳು ಯಾವುವು?

ಇ) ಈ ಪಟ್ಟಣವನ್ನು ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಲು ನಿಗಧಿಪಡಿಸಲಾಗಿರುವ ಅನುದಾನ ಎಷ್ಟು?

ಈ) ಹಾಗಿದ್ದಲ್ಲಿ ಈ ಪಟ್ಟಣವನ್ನು ಯಾವ ನಿರ್ದಿಷ್ಟವಾದ ಕಾಲಮಿತಿಯೊಳಗೆ ಪ್ರಾಧಿಕಾರದ ಮೂಲಕ ಅಭಿವೃದ್ಧಿ ಪಡಿಸಲಾಗುವುದು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಬಸವನ ಬಾಗೇವಾಡಿ ಪಟ್ಟಣವನ್ನು ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯಲ್ಲಿ ಸೇರಿಸಲು ನಿಯಮಗಳಡಿಯಲ್ಲಿ ಅವಕಾಶ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

172(360) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರವು ವೈನ್ ಉದ್ಯಮವನ್ನು ಸ್ಥಾಪಿಸಲು ಅನುಕೂಲಕರವಾದ ಸ್ಥಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವೈನ್ ಉದ್ಯಮವನ್ನು ಸ್ಥಾಪಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದೇ;

ಇ) ಹಾಗಾದರೆ ಉತ್ತಮ ಆದಾಯವನ್ನು ತರಬಲ್ಲ ಹಾಗೂ ದ್ರಾಕ್ಷಿ, ದಾಳಿಂಬೆ ಬೆಳೆಗಾರರಿಗೆ ಉತ್ತೇಜನ ನೀಡಬಲ್ಲ ವೈನ್ ಉದ್ಯಮವನ್ನು ಸ್ಥಾಪಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು;

ಈ) ಈ ಜಿಲ್ಲೆಯಲ್ಲಿ ವೈನ್ ಉದ್ದಿಮೆಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದ್ದಲ್ಲಿ ಯಾವ ಕಾಲ ಮಿತಿಯೊಳಗೆ ವೈನ್ ಉದ್ಯಮವನ್ನು ಸ್ಥಾಪಿಸಲಾಗುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ಹೌದು.

ಆ) ಹೌದು.

ಇ) ವೈನರಿ ಸನ್ನದು ಕೋರಿ ಬರುವ ಅರ್ಜಿಗಳನ್ನು ನಿಯಮಗಳ ಅನುಸಾರ ಪರಿಶೀಲಿಸಲಾಗುವುದು.

ಈ) ಜಿಲ್ಲೆಯಲ್ಲಿ ವೈನ್ ತಯಾರಿಕೆಗಾಗಿ ವೈನರಿ ಸನ್ನದು ಕೋರಿ ಸಲ್ಲಿಸಲಾಗುವ ಅರ್ಜಿಗಳು ಅಗತ್ಯ ದಾಖಲೆಗಳನ್ನೊಳಗೊಂಡು ನಿಯಮ ಬದ್ದವಾಗಿದ್ದಲ್ಲಿ ವಿಳಂಬಕ್ಕೆ ಅವಕಾಶ ನೀಡದೇ ಪರಿಗಣಿಸಲಾಗುವುದು.